KACM510002452025

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ನರಸಿಂಹರಾಜಪುರ

## ಸಿ. ಸಿ. ನಂಃ**33/2025**

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಎನ್. ಆರ್. ಪುರ ಪೊಲೀಸರು

ವಿರುದ್ಧ

ಆರೋಪಿತರು ಃ

**1.** ಚಂದನ್ ಕುಮಾರ್ ಕೆ ಬಿನ್ ಕೃಷ್ಣ
**19** ವರ್ಷ, ಐಟಿಐ ವಿದ್ಯಾರ್ಥಿ,
ರಾಜೀವ್ ನಗರ, ನ.ರಾ.ಪುರ ಪಟ್ಟಣ,
ನ.ರಾ.ಪುರ ತಾಲ್ಲೂಕು.

**2.** ಸಿರಾಜುದ್ದೀನ್ ಯಾನೆ ಜಾಫರ್ ಬಿನ್ ಜಬಿ,
**23** ವರ್ಷ, ಚೀಲದ ವ್ಯಾಪಾರ ವೃತ್ತಿ,
ಟ್ಯಾಂಕ್ ಮೊಹಲ್ಲಾ, **6** ನೇ ಕ್ರಾಸ್,
ಬಾಪೂಜಿ ನಗರ, ಶಿವಮೊಗ್ಗ ಟೌನ್,
ಶಿವಮೊಗ್ಗ ಜಿಲ್ಲೆ.

**3.** ತೌಫಿಕ್ ಬಿನ್ ನಿಸಾರ್ ಅಹಮ್ಮದ್,
**22** ವರ್ಷ, ಮೆಕಾನಿಕ್ ಕೆಲಸ,
ಟ್ಯಾಂಕ್ ಮೊಹಲ್ಲಾ, **7** ನೇ ಕ್ರಾಸ್,
ಬಾಪೂಜಿ ನಗರ, ಶಿವಮೊಗ್ಗ ಟೌನ್,
ಶಿವಮೊಗ್ಗ ಜಿಲ್ಲೆ.
ಸ್ವಂತ ಊರು ರಾಜೀವ್ ನಗರ,
ಎನ್ ಆರ್ ಪುರ ಟೌನ್.

## ಆರೋಪಣೆ

ದಿನಾಂಕಃ 16/06/2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 1 ನೇ ಆರೋಪಿಯಾದ ನೀವು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಮತ್ತು 2 ನೇ ಆರೋಪಿಯಾದ ನಿಮ್ಮ ಮುಖಾಂತರ ಶಿವಮೊಗ್ಗ ವಾಸಿಗಳಾದ ಆಶು ಮತ್ತು ಸಾಯಿಲ್ ಎಂಬುವರಿಂದ ಕೆಎ 14 ಇ ಎನ್ 1422 ಎಂದು ಸುಳ್ಳು ನಂಬರ್ ಪ್ಲೇಟ್ ಇರುವ ಇಂಜಿನ್ ನಂಬರ್ 0 ಇ 6 ಜಿಜಿ2122029 ಮತ್ತು ಚಾಸಿಸ್ ನಂಬರ್ ಎಂ ಡಿ 634 ಕೆಇ 64 ಜಿ2 ಜಿ54312 ರ ಟಿ ವಿ ಎಸ್ ಅಪ್ಪಾಚೆ ಬೈಕನ್ನು ರೂ.10,000/- ಹಣ ಕೊಟ್ಟು ಕೊಂಡು ಕೊಂಡು ತನ್ನ ಬಳಿಯಲ್ಲಿ ಇಟ್ಟುಕೊಂಡಿದ್ದು, ಸದರಿ ಬೈಕನ್ನು ದಿನಾಂಕಃ 25/06/2022 ರಂದು

KACM510002452025



ಬೆಳಿಗ್ಗೆ 8.00 ಗಂಟೆಗೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಅಬ್ದುಲ್ ನಸೀರನಿಗೆ ಚಲಾಯಿಸಲು ನೀಡಿದ್ದು, ಆತನಿಗೆ ಬೈಕು ಚಾಲನೆ ಮಾಡಲು ಚಾಲನಾ ಪರವಾನಗಿ ಪತ್ರ ಇಲ್ಲದೇ ಇರುವುದು ಗೊತ್ತಿದ್ದು ಸಹ ಆತನಿಗೆ ಚಾಲನೆ ಮಾಡಲು ಬೈಕನ್ನು ಕೊಟ್ಟು ಆ ಮೂಲಕ ನೀವು ಕಲಂ **180** ಮೋಟರ್ ವಾಹನ ಕಾಯ್ದೆಯ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಸದರಿ ಬೈಕಿಗೆ ವಿಮೆ ಚಾಲ್ತಿಯಲ್ಲಿ ಇಲ್ಲದೇ ಇರುವುದು ಗೊತ್ತಿದ್ದು ಸಹ ಆತನಿಗೆ ರಸ್ತೆ ಮೇಲೆ ಚಾಲನೆ ಮಾಡಲು ಬೈಕನ್ನು ಕೊಟ್ಟು ಆ ಮೂಲಕ ನೀವು ಕಲಂ **196** ಮೋಟರ್ ವಾಹನ ಕಾಯ್ದೆಯ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಅಪಘಾತದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಮೂಲಕ 1 ನೇ ಆರೋಪಿಯಾದ ನೀವು ಸದರಿ ಬೈಕನ್ನು ತಮ್ಮ ಮನೆಯ ಹತ್ತಿರ ತರಿಸಿಕೊಂಡು ಸದರಿ ಘಟನೆಯ ಬಗ್ಗೆ ಪೊಲೀಸರಿಗೆ ತಿಳಿಸದೇ 2 ನೇ ಆರೋಪಿಯಾದ ನಿಮ್ಮನ್ನು ಸಂಪರ್ಕಿಸಿ ವಿಚಾರ ಮಾಡಿದ್ದು ಆ ಮೂಲಕ ನೀವು ಕಲಂ **202** ಭಾರತೀಯ ದಂಡ ಸಂಹಿತೆ ಅಡಿ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಯಾದ ನಿಮ್ಮ ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಮೂಲಕ ಅಪಘಾತಕ್ಕೆ ಸಂಬಂಧಿಸಿದ ಬೈಕನ್ನು ಶಿವಮೊಗ್ಗಕ್ಕೆ ತರಿಸಿಕೊಂಡು 3 ನೇ ಆರೋಪಿಯಾದ ನೀವು ಸದರಿ ಬೈಕನ್ನು ರಿಪೇರಿ ಮಾಡಿ, ಅಪಘಾತದಲ್ಲಿ ನುಜ್ಜುಗುಜ್ಜಾದ ಬೈಕನ್ನು ರಿಪೇರಿ ಮಾಡಿ ತನ್ನ ಬಳಿ ಬಚ್ಚಿಟ್ಟುಕೊಂಡು ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸಿದ್ದು ಆ ಮೂಲಕ ನೀವು ಕಲಂ **201** ಭಾರತೀಯ ದಂಡ ಸಂಹಿತೆ ಅಡಿ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉಃ ಆಃ1

ಆಃ2

ಆಃ3

KACM510002452025



ಪ್ರಃ2. ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆಃ1

ಆಃ2

ಆಃ3

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ12 ನೇ ದಿವಸ ಜನವರಿ ಮಾಹೆ 2026.

Chandan.K

Thogick

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ
ನ.ರಾ.ಪುರ.

ಆರೋಪಿತರ ಸಹಿಃ